ಕನ್ನಡ ಜಿಲ್ಲೆಯಲ್ಲಿ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡ ನಿರ್ಮಾಣ

1540 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಂತ ಕಟ್ಟಡವಿಲ್ಲದೆ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಪದವಿ ಪೂರ್ವ ಕಾಲೇಜುಗಳಿಗೆ ಎಂದು ಸ್ವಂತ ಕಟ್ಟಡ ಒದಗಿಸಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ 67 ಪ.ಪೂ.ಕಾಲೇಜುಗಳೂ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಾಗಿವೆ. ಇವು ಪ್ರೌಢಶಾಲಾ ಕಟ್ಟಡದಲ್ಲಿ ನಡೆಯುತ್ತಿವೆ.

ಆ) ಸರ್ಕಾರಿ ಪದವಿ ಪುರ್ವ ಕಾಲೇಜುಗಳಿಗೆ ಸ್ಥಳಾವಕಾಶ ಅಗತ್ಯತೆ ಇರುವಲ್ಲಿ ಲಭ್ಯ ಆಯವ್ಯಯರ ಲಭ್ಯತೆಗೆ ಒಳಪಟ್ಟು ಹೆಚ್ಚುವರಿ ಕೊಠಡಿಗಳನ್ನು ಹಂತಹಂತವಾಗಿ ಮಂಜೂರು ಮಾಡಲಾಗುವುದು.

ಅರಣ್ಯ ಇಲಾಖೆಯಲ್ಲಿ ಅವಧಿ ಪೂರ್ವ ಮತ್ತು ಅವಧಿ ನಂತರದ ವರ್ಗಾವಣೆ

1541 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಅವಧಿ ಪೂರ್ವ ಮತ್ತು ಅವಧಿ ನಂತರದ ವರ್ಗಾವಣೆಯಲ್ಲಿ ಭಾರಿ ಅವ್ಯವಹಾರವಾಗಿದೆ ಎನ್ನುವುದು ನಿಜವೇ?

ಆ) 1996-97ರಲ್ಲಿ ಎಲ್ಲಾ ಹಂತಗಳಲ್ಲಿ ಅರಣ್ಯ ಇಲಾಖೆಯಲ್ಲಿ ಆದ ವರ್ಗಾವಣೆಯ ವಿವರವೆಷ್ಟು? (ಪೂರ್ಣ ವಿವರ ಒದಗಿಸುವುದು).

ಇ) ಅವಧಿ ಪೂರ್ವ ವರ್ಗಾವಣೆ ಎಷ್ಟು? (ಪೂರ್ಣ ವಿವರ ಒದಗಿಸುವುದು).

ಈ) ಅವಧಿ ನಂತರದ ವರ್ಗಾವಣೆ ಎಷ್ಟು? (ಪೂರ್ಣ ವಿವರ ಒದಗಿಸುವುದು).

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ ಅಂತಹ ಅವ್ಯವಹಾರಗಳು ಯಾವುವೂ ಗಮನಕ್ಕೆ ಬಂದಿರುವುದಿಲ್ಲ.

ಆ) 19''6-97ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ಆಗಿರುವ ವರ್ಗಾವಣೆಗಳ ವಿವರ

ಈ ಕೆಳಕಂಡಂತಿದೆ.

1.	'ಎ' ವರ್ಗ	-	82
2.	'ಬಿ' ವರ್ಗ	-	67
3.	'ಸಿ' ವರ್ಗ	-	71
	ಒಟ್ಟು		**220**

ಇ) 1996-97ನೇ ಸಾಲಿನಲ್ಲಿ ಮಾಡಲಾಗಿರುವ ಅವಧಿ ಪೂರ್ವ ವರ್ಗಾವಣೆಗಳ ವಿವರ ಈ ಕೆಳಕಂಡಂತಿದೆ:

1.	'ಎ' ವರ್ಗ	-	66
2.	'ಬಿ' ವರ್ಗ	-	42
3.	'ಸಿ' ವರ್ಗ	-	27
	ಒಟ್ಟು		**135**

ಈ) 1996-97ನೇ ಸಾಲಿನಲ್ಲಿ ಮಾಡಲಾಗಿರುವ ಅವಧಿ ನಂತರದ ವರ್ಗಾವಣೆಗಳ ವಿವರಗಳು ಈ ಕೆಳಕಂಡಂತಿದೆ :

1.	'ಎ' ವರ್ಗ	-	16
2.	'ಬಿ' ವರ್ಗ	-	25
3.	'ಸಿ' ವರ್ಗ	-	44
	ಒಟ್ಟು		**85**

ರಾಜ್ಯದಲ್ಲಿ ಖಾಲಿ ಇರುವ ದಂತ ವೈದ್ಯರ ಖಾಲಿ ಹುದ್ದೆಗಳು

1542 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಂತ ವೈದ್ಯರ ಎಷ್ಟು ಹುದ್ದೆಗಳು ಖಾಲಿ ಇವೆ.?

ಆ) ಖಾಲಿ ಹುದ್ದೆಗಳಲ್ಲಿ ಭರ್ತಿ ಮಾಡಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಇ) ದಂತ ವೈದ್ಯರಿಲ್ಲದ ಸರ್ಕಾರಿ ಆಸ್ಪತ್ರೆಗಳಿಗೂ ದಂತ ಚಿಕಿತ್ಸೆಯ ಉಪಕರಣಗಳನ್ನು ಸರಬರಾಜು ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ?